Reg No. M 1299 (Founded 1917) Daily & Weekly

ಸತ್ಯವಾದಿ
SATYAVADI

(ಆಲಮನೆ ಸೀರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 28 ಸಂಚಿಕೆ 177] ಶುಕ್ರವಾರ 6—4—45 [3 ಪೈ

ವಿವಿಧ ವರ್ತಮಾನ

ಮೈಸೂರಿನ ಸುಪ್ರಸಿದ್ಧ ಮಹಿಸೀಯು ಕಾದ ಧರ್ಮಪ್ರಕಾಶ ಶ್ರೀ ಜಿ. ಎಂ. ಶ್ರೀನಿವಾಸಯ್ಯನವರು ಸಿಯಾಂ ಮೊಹಲ್ಲದಲ್ಲಿ ಹೈಸ್ಕೂಲ್ ಕಟ್ಟಡಕ್ಕೆ ಐವತ್ತು ಸಾವಿರ ರೂಪಾಯಿಗಳನ್ನು ದಾನ ಮಾಡಿರುತ್ತಾರೆ. ಹೈಸ್ಕೂಲ್ಗೆ ಧರ್ಮ ಪ್ರಕಾಶ ಶ್ರೀನಿವಾಸಯ್ಯ ಹೈಸ್ಕೂಲ್ ಎಂದು ಹೆಸರು. ಇವರು ಮೈಸೂರು ಮತ್ತು ಭಾರತೀಯ ಅನೇಕ ಧರ್ಮಕಾರ್ಯಗಳಿಗೆ ಸಹಾಯ ಮಾಡಿರುತ್ತಾರೆ. ಇವರ ಸೊಬೂನು ಕಾರ್ಖಾನೆ ಬಹಳ ಪ್ರಸಿದ್ಧವಾಗಿದೆ. (ಮುಂಬಯಿನಲ್ಲಿ)

ನಿನ್ನೆ ದಿವಸ ರಾತ್ರಿ ರಾಜಧಾನಿಯಲ್ಲಿ ಭಾರಿ ಅಲಿಕಲ್ಲಿನ ಮಳೆ ಸುರಿದು ಅನೇಕ ಗಿಡ ವರ್ಗಗಳು ಉದುರಿಹೋದವು. ಅನೇಕ ಕಡೆ ದೀಪವೆ ಆರಿಹೋಗಿದ್ದವು.

ಮೂವರು ಅಮೇರಿಕ ಸಿಪಾಯಿಗಳು, ಕಲ್ಕತ್ತಾದಲ್ಲಿ ಮೋಟಾರಿನಲ್ಲಿ ಹೋಗುತ್ತಿದ್ದ ವಾಹನದ ಸ್ತ್ರೀಯರನ್ನು ಗಾಡಿಯಿಂದ ಕೆಳಕ್ಕೆ ಎಳೆದು ಮಾನಭಂಗ ಮಾಡಿ ಬೀದಿಯಲ್ಲಿ ಎಸೆದರೆಂದು ಕೇಂದ್ರ ಸಭೆಯಲ್ಲಿ ಕೇಳಿದ ಪ್ರಶ್ನೆಗೆ ತಮಗೆ ಆ ವಿಷಯವೇ ಗೊತ್ತಿಲ್ಲವೆಂದು ಸರ್ಕಾರಿ ಉತ್ತರವಾಯಿತು.

ಬ್ರಿಟಿಷ್, ರಷ್ಯಾ ಪದ್ಧತಿಯೇ ಜನಗಳನ್ನು ಸೇನೆಗೆ ಸೇರಿಸುವುದು ಸರಿಯಿಲ್ಲವೆಂದು ಬಹುಮತದಿಂದ ಅಮೇರಿಕಾ ಸೆನೇಟಿನಲ್ಲಿ ತಿರಸ್ಕಾರವಾಯಿತು.

ಜಪಾನೀಯರ ಮಿಲಿಟರಿ ಅಧಿಕಾರಿಗಳಲ್ಲಿ ಬಹಳ ಬದಲಾವಣೆಯಾಗಿದೆ.

ಆಸ್ಟ್ರೇಲಿಯಾ ಡೆ. ಪ್ರೆಸಿಡೆಂಟರು ಲಂಡನ್ನಿನಲ್ಲಿ ಕೊಟ್ಟ ತಮ್ಮ ಹೇಳಿಕೆಯಲ್ಲಿ ಜಪಾನಿಗಳು ಬೇಗನೆ ಸೋಲಲಾರರೆಂದೂ ಅವರನ್ನು ಸೋಲಿಸಲು ಸ್ವಲ್ಪ ಕಾಲ ಹಿಡಿಯುವುದೆಂದೂ, ಹೇಳಿದರು.

ಒಷ್ಟೇನರೇ ಆಗಲಿ ಮಿತ್ರರೇ ಆಗಲಿ ಯಾರು ಬರುವರೆಂದು ಗಮನಿಸದೆ, ಬರ್ಮಾನ್ ಪ್ರಜೆಗಳು ಬಿಳೀ ಜಾವುಟ ತಯಾರು ಮಾಡಿಕೊಳ್ಳುತ್ತಿರುವರು.

ಡೊಮಿನಿಯರ್ಗಳು ಸ್ವತಂತ್ರವರ್ತಿಗಳಾಗಿವೆಯೆಂದು ಲಾರ್ಡ್ ಹಾಲಿಫಾಕ್ಸ್ ರವರು ಅಮೇರಿಕಾದಲ್ಲಿ ಹೇಳಿದರು.

ಅಮೇರಿಕಾದಲ್ಲಿ ಕಲ್ಲಿದ್ದಲ ಗಣಿ ಕೆಲಸಗಾರರ ಮುಷ್ಕರವಾಗಿ 80 ಸಾವಿರ ಕೂಲಿಗಾರರು ಕೆಲಸಕ್ಕೆ ಜಾರದೆ ನಿಂತಿರುವರಂತೆ.

'ಹಿಟ್ಲರ್ ಪ್ರಾಣತ್ಯಾಗ ಮಾಡಲಿ"

ಒರ್ಮನ್ ಅಧಿಕಾರಿಗಳು ಹಿಟ್ಲರಿಗೆ 7 ದಿವಸ ಅವಧಿ ಕೊಟ್ಟು ಇಷ್ಟರಲ್ಲಿ ಶರಣಾಗತನಾಗು ಮತ್ತು ಗೌರವದಿಂದ ಆತ್ಮಹತ್ಯ ಮಾಡಿಕೋ ಎಂದು ಹೇಳಿರುವರಂತೆ. ಹಿಟ್ಲರಿಗೆ ದೇವರದಯ ತನ್ನ ಮೇಲೆ ಇನ್ನೂ ಇರುವುದೆಂದೂ ಯುದ್ಧದಲ್ಲಿ ಗೆಲ್ಲುವೆನೆಂದೂ ಭರವಸೆ ಇರುವುದೆಂದು ಇವರೇ ಹೇಳುತ್ತಾರೆ.

ಹಿಮ್ಲರು ತನ್ನ ಆಸ್ಥಿತನ್ನು ತಟಸ್ಥ ರಾಜ್ಯಗಳಿಗೆ ಕಳುಹಿಸುತ್ತಿರುವನು. ಜರ್ಮನ್ ಆಸ್ತರು ಭೂಮಿಜೊಳಗೆ ಸೇರಿಕೊಂಡು ಮುಂದಿನ ಯುದ್ಧಕ್ಕೆ ಅಣಿ ಮಾಡಿಕೊಳ್ಳುತ್ತಿರುವರೆಂದು ಹೇಳಲಾಗಿದೆ.

ಸ್ಯಾನ್ ಫ್ರಾನ್ಸಿಸ್ಕೋ ಸಮ್ಮೇಳನ ನಿಂತರೆ ಫ್ರಾನ್ಸಿಗೆ ವ್ಯಸನವಿಲ್ಲವಂತೆ.

ಕಲಕತ್ತಾದಲ್ಲಿ 3 ವೃತ್ತಪತ್ರಿಕೆಗಳ ಕಛೇರಿಯನ್ನು ಜಪ್ತಿಮಾಡಿ ಕೆಲವು ಕಾಗದಪತ್ರಗಳನ್ನು ಪೋಲೀಸರು ವಶಪಡಿಸಿಕೊಂಡರು.

ಈ ಬೇಸಿಗೆಯಲ್ಲಿ ಭಾರತದ 16 ರಾಜರು ಲಂಡನ್ನಿಗೆ ಬರುವವರಾಗಿರುವರಂತೆ. ಅವರೆಲ್ಲರೂ ಶಾಂತಿ ಉತ್ಸವದಲ್ಲಿ ಭಾಗಿಗಳಾಗಲು ಜೂನ್ನಲ್ಲಿ ಬರುವವರಾಗಿರುವರೆಂದು ಲಂಡನ್ ಪತ್ರಿಕೆಯು ತಿಳಿಸುತ್ತದೆ.

ಬ್ರಿಟನ್ನಿನಲ್ಲಿ ವಿಮಾನ ಕಾರ್ಖಾನೆಗಳಲ್ಲಿ ಮುಷ್ಕರವಾಗಿ 30 ಸಾವಿರ ಕೆಲಸಗಾರರು ಕೆಲಸನೂಡದೆ ನಿಂತಿರುವರು.

ಚೀನೂರ್ ಮತ್ತು ಆಸ್ಪಿ ಮೊಖದ್ದಮೆಯ ಹೀಬಸ್ ಕಾರ್ಪಸ್ ಅರ್ಜಿಯ ವಿಚಾರಣೆಯು ನಾಗಪುರ ಹೈಕೋರ್ಟಿನಲ್ಲಿ ಇದೇ 10 ನೇ ತಾರೀಖಿನಲ್ಲಿ ವಿಚಾರಣೆಯಾಗುವುದು.

3 ಜರ್ಮನ್ ವಿಮಾನಗಳು ಸಿವಿಲಿಯನ್ ಪ್ರಜೆಗಳನ್ನೊಡಗೂಡಿ ಸ್ವೀಡನ್ನಿಗೆ ಬಂದಿದೆ.

ಜನರಲ್ ಸ್ಮಟ್ಸರು ಇಂಗ್ಲೆಂಡಿಗೆ ವಿಮಾನದಲ್ಲಿ ಬರುತ್ತಿರುವಾಗ ವಿಮಾನಕ್ಕೆ ಮಿಂಚು ಹೊಡೆಯಿತು. ದೈವವಶಾತ್ ಇವರಿಗೆ ಏನೂ ಅಪಾಯವಾಗಲಿಲ್ಲ.

ಶ್ರೀಮತಿ ಯಶೋಧರ ದಾಸಪ್ಪ, ತುಕ್ಕಾಚಾಯಿ ಮತ್ತು ಕಾಮಾಕ್ಷಿ ದೇವಿಯರು ಬೊಂಬಿ ರಚನಾತ್ಮಕ ಕೆಲಸಗಾರರ ಕ್ಯಾಂಪಿನಲ್ಲಿ 6 ವಾರಗಳ ಶಿಕ್ಷಣ ಪಡೆಯಲು ಬೆಂಗಳೂರಿನಿಂದ ಪ್ರಯಾಣ ಮಾಡಿದರು. ಶ್ರೀಮತಿ ವೆಂ ಕೋಜೀರಾಯರು ಅವರಿಗೆ ಒಂದು ಔತಣ ಕೊಟ್ಟರು.

ವಿದೇಶಾಂತರಂಗ

ಈವರೆಗೆ ಬ್ರಿಟಿಷ್ ಸರ್ಕಾರಕ್ಕೆ ನಾಶವಾಗಿದೆ. ಅಂದರೆ ಧ್ವಂಸವಾಗಿದೆ. ಪ್ರತಿದಿನ ದವರೆ 2500 ನೌಕೆಗಳನ್ನು ಕಟ್ಟುವರು.

ಜರ್ಮನಿಯವರು ರೈನ್ ಕಣಿವೆಯಲ್ಲಿ ಕೃತ್ರಿಮ ನಗರ ರಚಿಸಿದ್ದ ಹಾಗೆ ಜಪಾನೀಯ ಕೃತ್ರಿಮ ಕಾರ್ಖಾನೆಗಳನ್ನು ರಚಿಸಿರುವುದನ್ನು ಅಮೇರಿಕನ್ ಮೈಮಾನಿಕರು ಪತ್ತೆ ಹಚ್ಚಿದರು.

ಇಂಟರ್ ನ್ಯಾಷನಲ್ ಲೇಬರ್ ಆಫೀಸಿನವರು ಹೊರಡಿಸಿದ ಆಹಾರ ಪದಾರ್ಥಗಳ ಬೆಲೆ ವಿಷಯದಲ್ಲಿ ಕೆಲವು ದೇಶಗಳು ಮುಖ್ಯವಾದಿ ಭಾರತದೇಶ ಮಿನಃ ಮಿಕ್ಕ ಎಲ್ಲಾ ದೇಶಗಳಲ್ಲಿಯೂ ಬೆಲೆ ಏರಲಿಲ್ಲವೆಂದೂ ಪ್ರಕಟಿಸಿರುತ್ತಾರೆಂದು ಕೆನಡದಿಂದ ವಾರ್ತೆ ಬಂದಿದೆ. ಮುಂಬಯಿನಲ್ಲಿ ಇಂಡೆಕ್ಸ್ ನಂಬರು ಈಚಿಗೆ ಒಂದು ತಿಂಗಳಲ್ಲಿ 235 ರಿಂದ 250 ಕ್ಕೆ ಏರಿದೆ.

ಪರ್ಷಿಯಾದಲ್ಲಿ ಪೆಟ್ರೋಲ್ ಸಿಗುವುದು ದುರದೃಷ್ಟವೆನ್ನಬಹುದು. ತೈಲೋತ್ಪಾದಿಗಳು ತಾವು ಒಬ್ಬರೊಬ್ಬರೇ ಆ ಎಣ್ಣೆಯ ಒಡೆಯರಾಗಬೇಕೆಂದು ಇಚ್ಛಿಸುತ್ತಿರುವರು.

ಈಗಿನ ಯುದ್ಧದ ಒಂದು ಉದ್ದೇಶವು ಅಮೇರಿಕನರು ಪ್ರಪಂಚದ ವೃತ್ತಪತ್ರಿಕೆಗಳಿಗೆ ಸ್ವಾತಂತ್ರ್ಯ ಕೊಡಿಸಬೇಕೆನ್ನುವುದು ಎಂದು ಅಮೇರಿಕಾದ ಒಂದು ಪತ್ರಿಕೆ ಬರೆದಿದೆ.

ಮೊನ್ನೆಯಿಂದ ಕಾರ್ಮೆಲ್ನ ಸಮ್ಮೇಳನ ಲಂಡನ್ನಲ್ಲಿ ಪ್ರಾರಂಭವಾಗಿದೆ

ಆಕಾಶವಾಣಿ 6—4—45

ಮೃತ್ಯುಂಜಯ ಬೆಳಿಗ್ಗೆ 8-50, ಮಧ್ಯಾಹ್ನ 2-50, ಸಾ. 6-30, 7-30. ರಾತ್ರಿ 10. ಬಿ. 8 ವೇಣುವಾದನ. ಮ. 2 ಶ್ರೀ ಕಮಲ, ವೆಂಕಾಡಮ್ಮನವರ ಹಾಡುಗಾರಿಕೆ, 2-15 ಜಯಾ ದಾರರ ಧರ್ಮ, 2-35 ತೌರುಮನೆ ಸಂಭಾಷಣೆ. ಸಾ. 6 ವೀಳಯವಾದ್ಯ, 7-15 ಭಜನೆ, 7—50 ಬೊಂಬಯಿ ಮನೆ ನಾಟಕ. ರಾ. 8-30 ಸೀತಾಕಲ್ಯಾಣ ನಾಟಕ.

ಚಿನ್ನಾ ಬೆಳ್ಳಿ ಧಾರಣೆ

ಸವರನ್ 1 ಕ್ಕೆ	ರೂ. 50-8-0
ಚಿನ್ನ ತೊಲ 1 ಕ್ಕೆ	74-0-0
ಬೆಳ್ಳಿ "	1-5-0

ಸಂಸ್ಥಾನದ ಸುದ್ದಿಗಳು

ರಾಜಧಾನಿಯ ಚಾಮರಾಜ ಮೊಹಲ್ಲಾ ಸಭೆಯು ಮಾಮೂಲ್ ಮೇರೆ ಇದೇ 13 ರಿಂದ 21 ರ ವರೆವಿಗೆ ಕಾಂತರಾಜರಸ್ತೆಯಲ್ಲಿ ಹಾಕಿರುವ ಚಪ್ಪರದಲ್ಲಿ ಶ್ರೀಮದ್ರಾಮಾಯಣ ಪಾರಾಯಣ ಶ್ರೀ ಸೂರ್ಯನಮಸ್ಕಾರ, ಅಷ್ಟೋತ್ತರ ಪೂಜೆ, ಕುಂಕುಮಾರ್ಚನೆ, ದೀಪಾರಾಧನೆ, ಸಂಗೀತ, ಹರಿಕಥೆ ನಡೆಸುವರು. 22 ರಲ್ಲಿ ಹನುಮಂತೋತ್ಸವವನ್ನು ನಡೆಸುವರು. ಭಕ್ತರು ಉದಾರ ದಾನಮಾಡಿ ಶ್ರೀರಾಮರ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕೆಂದು ಸೆಕ್ರಟರಿ ಎಲ್. ಶೇಷಗಿರಿರಾಯರು ಪ್ರಾರ್ಥಿಸುತ್ತಾರೆ.

ಂ ಂ

ಸೋಸಲೆ ವ್ಯಾಸರಾಯ ಮಠದ ಶ್ರೀ ಸ್ವಾಮಿಗಳು ಶಾರದ ವಿಲಾಸ ಇಂಟರ್ ಕಾಲೇಜ್ ನಿಧಿಗೆ ರೂ 50 0 ದಾನ ಮಾಡಿರುವರು.

ಂ ಂ

ಸಂಸ್ಕೃತ ಪಾಠಶಾಲೆಗೆ ಮೂಗೂರು ಕರ್ನಾಟಕರನ್ನು ಸೇರಿಸಿಕೊಳ್ಳಿರೆಂದು ಶ್ರೀ ಶಗಡೂರು ರಾಮಚಂದ್ರರಾಯರು ಶ್ರೀ ಟಿ. ರಾಮಯ್ಯನವರಿಗೆ ಪತ್ರಬರೆದಿರುವರು.

ಂ ಂ

ಬಿನ್ನಮಿಲ್ ಬಟ್ಟೆಯನ್ನು ಜಿಲ್ಲಾಧಿಕಾರಿಗಳ ಆಜ್ಞೆಯಿಲ್ಲದೆ ಕಡೂರಿನಲ್ಲಿ ಒಬ್ಬರೂ ಮಾರಕೂಡದೆಂದು ತಿಳಿಯಬಂದಿದೆ.

ಂ ಂ

ಪ್ರಥಮಪಥ ಭದ್ರಾವತಿ ಕಾಗದದ ಕಾರ್ಖಾನೆಯವರು 1-1-45 ರಲ್ಲಿ ಸ್ಪೋರ್ಟ್ಸ್ ದಿನವನ್ನು ಆಚರಿಸಿದರು.

ಂ ಂ

ಇದೇ 7 ನೇ ತಾರೀಖು ಬೆಂಗಳೂರು ಪುಟ್ಟಣ್ಣಚೆಟ್ಟರ ಭವನದಲ್ಲಿ ಆಲ್ಬರ್ಟ್ ಜೇನರ್ಜಿರವರ ಅಧ್ಯಕ್ಷತೆಯಲ್ಲಿ ಡಿ || ಕೋಟರಿ ಸಮ್ಮೇಳನ ನಡೆಯುವುದಾಗಿ ತಿಳಿದುಬಂದಿದೆ.

ಂ

ತುಮಕೂರಿನಲ್ಲಿ ನಡೆಯುವ ವೀರಶೈವ ಮಹಾಸಭೆಯು ಮುಂಬಯಿಯ ನಿವೃತ್ತ ಡಿ || ಜಡ್ಜಿ ಶ್ರೀ ಸಿ. ಸಿ. ಪಟೇಲ ಕೋಟಿಯವರ ಅಧ್ಯಕ್ಷತೆಯಲ್ಲಿ ಸೇರುವುದಾಗಿ ತಿಳಿದುಬಂದಿದೆ.

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.

At Ranjit Pagli Duniya

ರಣಜಿತ್ ಟಾಕೀಸಿನಲ್ಲಿ 4 ನೇ ಆಮೋಘ ವಾರ

ಪಗಲಿ ದುನಿಯಾ

(ಹಿಂದಿ)

ನುಮ್ಮಾಜ್ ಶಾಂತಿ ಮೋತಿಲಾಲ್ ಜೇಕ್‌ಮುಕ್ತಾರ್

ಪಾತ್ರವಹಿಸಿರುವರು

AT OPERA — DOST

ಅಪೆರಾ ಟಾಕೀಸ್ 3 ನೇ ವಾರ

ಮೋತಿಲಾಲ್, ನೂರ್‌ಜಹಾನ್ ಪಾತ್ರವಹಿಸಿರುವ

ದೋಸ್ತ್ (ಹಿಂದಿ)

From 7-4-45

Air Raid Wardens

With Stan Laurel & Oliver Hardy

ಗೈ ಕೋಟೆ ಸಾಲಿನಲ್ಲಿ ಒಂದು ಅಮೋಘವಾದ ಬೀಸ್ ಮೊಟಾರು ಂ

For Good Printing—

L. N. Press

Srirampet MYSORE

TALK-A-TONE

(The Pioneer Film-mag of S. India)

From 1-3-45 Re. 1 per copy.

Local Agent—D. Mahaadev

Opera Talkies, Mysore

ಆಂದವಾದ ಹೊಲಿಗೆಗೆ

— ನಮ್ಮಲ್ಲಿ ಬನ್ನಿ —

ಶ್ರೀ ಮಹಾಲಕ್ಷ್ಮಿ ಹಾಲ್

ಸಯ್ಯಾಜಿರಾವ್ ರಸ್ತೆ ಮೈಸೂರು

Good Coffee

Sastry's Coffee Rooms

Chamarajapuram, Mysore

Edited, Printed and published by M. S. Krishna Rao, at the Satvavadi Press, Chamaraja Agrahar, Mysore



ಟಿ.ಜೆ. ಹಾಲ್, ಸರಾಫ್ ಅಂಗಡಿ ರಸ್ತೆ ಬೀದಿ, ಮೈಸೂರು.